**ಓಎಸ್ ನಂಃ 5/2016**
**ಪಿಡಬ್ಲೂಃ 4**

**<u>ಸಾಕ್ಷಿಗೆ ದಿನಾಂಕ 29-11-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿಡಿ ವಕೀಲರಿಂದ</u>

ಪ್ರತಿವಾದಿ ನನ್ನ ತಮ್ಮನ ಸ್ನೇಹಿತನಾಗಬೇಕು. ನೀವು ಮತ್ತು ಪ್ರತಿವಾದಿ ಒಂದೇ ಜನಾಂಗದವರು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪ್ರತಿವಾದಿ ಮಾರಾಟ ಮಾಡುತ್ತಿದ್ದಾರೆಂದು ನನಗೆ ವಾದಿಯಿಂದ ಗೊತ್ತಾಯಿತು. ದಾವಾ ಆಸ್ತಿಯು ಪ್ರತಿವಾದಿಗೆ ಹೇಗೆ ಬಂತು ಎಂದು ಕೇಳಿದಾಗ ಸಾಕ್ಷಿ ಪ್ರತಿವಾದಿ ಅದನ್ನು ಖರೀದಿಸಿ ಪಡೆದಿದ್ದನು ಎಂದು ನುಡಿಯುತ್ತಾರೆ. ನಾನು ನಿಪಿ-4 ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ನಿಪಿ-4 ರ ವ್ಯವಹಾರದ ಬಗ್ಗೆ ನಿಮಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ನಿಪಿ-4 ಆದ ನಂತರ ಗೊತ್ತಾಯಿತು ಎಂದು ನುಡಿಯುತ್ತಾರೆ. ನನಗೆ ಪ್ರಭಾಕರ್ ಕಬಾಡೆಯವರ ಪರಿಚಯ ಇದೆ. ಅವರ ಪರಿಚಯ ಹೇಗೆ ಎಂದರೆ ಸಾಕ್ಷಿ ಆತ ನನ್ನ ಸ್ನೇಹಿತ ಎಂದು ನುಡಿಯುತ್ತಾರೆ. ವಾದಿಯು ದಾವಾ ಆಸ್ತಿಯ ಕರಾರು ಮಾಡಿಕೊಳ್ಳುವ ಮೊದಲು ದಾವಾ ಆಸ್ತಿಯ ಎಲ್ಲಾ ದಾಖಲೆಗಳು ಎಂದರೆ ಖರೀದಿ ಪತ್ರ ಮತ್ತು ಪಹಣಿಗಳನ್ನು ನಾನು ನೋಡಿರುತ್ತೇನೆ. ನಿಪಿ-4 ಕರಾರಿನಲ್ಲಿ ನಮೂದಾಗಿರುವ ಷರತ್ತುಗಳನ್ನು ಯಾರು ಹೇಳಿ ಬರೆಸಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಯೇ ಹೇಳಿ ಬರೆಸಿದ್ದಾರೆಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ ಒಂದು ಖರೀದಿ ಪತ್ರದ ನಕಲನ್ನು ತೋರಿಸಲಾಗಿ ಇದೇ ಖರೀದಿ ಪತ್ರವನ್ನು ನೋಡಿ ನೀವು ನಿಪಿ-4 ದಾಖಲೆಯನ್ನು ಮಾಡಿಸಿಕೊಂಡಿದ್ದೀರಿ ಎಂದು ಕೇಳಿದಾಗ ಸಾಕ್ಷಿ ಅದನ್ನು ನೋಡಿ ಒಪ್ಪಿ ದ್ದು ಆದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನೀವು ನಿಪಿ-4 ಮಾಡಿಕೊಳ್ಳುವ ಮೊದಲು ನಿಡಿ-1 ಅಥವಾ ಪಹಣಿ ಪತ್ರಿಕೆಯನ್ನು ವಕೀಲರಿಗೆ ತೋರಿಸಿ ಕಾನೂನಾತ್ಮಕ ಸಲಹೆ ಪಡೆದಿದ್ದೀರಾ ಎಂದರೆ ಸಾಕ್ಷಿ ನಾವು ಯಾವುದೇ ಸಲಹೆ ಪಡೆದಿಲ್ಲ ಎಂದು ನುಡಿಯುತ್ತಾರೆ. ನನಗೆ ನಿಪಿ-4ರಲ್ಲಿರುವ ಷರತ್ತುಗಳ ಬಗ್ಗೆ ಮಾಹಿತಿ ಇಲ್ಲ. ನಿಪಿ-4 ಆದ ನಂತರ ಅದರಲ್ಲಿರುವ ಷರತ್ತುಗಳ ಬಗ್ಗೆ ವಾದಿಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿದ್ದೇನೆ ವಾದಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಪ್ರತಿವಾದಿಗೆ ಮಾಹಿತಿ ಇದೆ ಎಂದು ತಿಳಿಸಿರುತ್ತಾರೆಂದು ನುಡಿಯುತ್ತಾರೆ. ನೀವು ಪ್ರತಿವಾದಿಗೆ ಸ್ವಯಂ ಆಗಿ ನಿಪಿ-4ರಲ್ಲಿರುವ

ಷರತ್ತುಗಳನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ಸದರಿ ನಿಪಿ-4ರಲ್ಲಿ 2 ವರ್ಷಗಳಲ್ಲಿ ನೋಂದಾಯಿತ ದಾಸ್ತಾವೇಜನ್ನು ಬರೆದುಕೊಡಬೇಕು ಎಂದು ನಮೂದಾಗಿದ್ದು ಅಷ್ಟು ದಿನ ಏಕೆ ಬೇಕು ಎಂದು ನಾನು ಕೇಳಿದ್ದೆ ಆಗ ಪ್ರತಿವಾದಿ 4-5 ತಿಂಗಳಲ್ಲಿ ಸರ್ವೆ ಮಾಡಿಸಿ ದಾಖಲೆ ಬರೆದುಕೊಡುತ್ತೇನೆಂದು ಹೇಳಿದ್ದ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಎಲ್ಲಾ ಫಾರ್ಮ್ ನಂಬರ್ 10 ಮತ್ತು ಸರ್ವೆ ಮೊದಲೇ ಆದ ಕಾರಣ ಏಕೆ ಮತ್ತೆ ಸರ್ವೆ ಮಾಡಿಸಬೇಕೆಂದು ಪ್ರತಿವಾದಿಗೆ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿಲ್ಲ ಎಂದು ನುಡಿಯುತ್ತಾರೆ.

ನೀವು ಏನು ಕೆಲಸ ಮಾಡುತ್ತೀರಾ ಎಂದರೆ ಸಾಕ್ಷಿ ನಾನು ಸಾಯಿ ಫೈನಾನ್ಸ್ ಕಂಪನಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನೀವು ಸದರಿ ಕಂಪನಿಯಲ್ಲಿ ಪಾರ್ಟ್ನರ್ ಸಹ ಆಗಿದ್ದೀರಿ ಎಂದರೆ ಸರಿ. ನಿಮ್ಮ ಫೈನಾನ್ಸ್ ಕಂಪನಿಯಲ್ಲಿ ಸಾಲ ಪಡೆದ ರಶೀದಿಯನ್ನು ನೀವೇ ನೀಡುತ್ತೀರಿ ಎಂದರೆ ಸರಿ. ನಿಪಿ-4 ದಾಖಲೆ ಆಗುವಾಗ ನನ್ನ ಫೈನಾನ್ಸ್ ಕಂಪನಿಯಲ್ಲಿ 1. ಅರ್ಜುನ್, 2. ಪ್ರಭಾಕರ, 3. ಸುಧಾಕರ್, 4. ಆನಂದ್, 5. ಸುನಿಲ್ ಇವರು ಪಾಲುದಾರರಾಗಿದ್ದರು. ಈಗ ನ್ಯಾಯಾಲಯದಲ್ಲಿ ಪಿಡಬ್ಲ್ಯೂ -3 ಎಂದು ಪ್ರಮಾಣ ಪತ್ರ ಸಲ್ಲಿಸಿದ ಪ್ರಭಾಕರ ನಿಮ್ಮ ಕಂಪನಿಯ ಪಾಲುದಾರ ಎಂದರೆ ಸರಿ. ಪ್ರತಿವಾದಿ ನಿಮ್ಮ ಕಂಪದಿನಿಯಲ್ಲಿ ಸಾಲ ಪಡೆದಿದ್ದ ಎಂದರೆ ಸರಿ. ಸಾಕ್ಷಿಯು ಮುಂದುವರಿದು ದ್ವಿಚಕ್ರವಾಹನ ಖರೀದಿ ಮಾಡಲು ಸಾಲ ಪಡೆದಿದ್ದು ಎಂದು ನುಡಿಯುತ್ತಾರೆ. ಸದರಿ ಸಾಲ ಪಡೆದ ಬಗ್ಗೆ ನಮ್ಮ ಕಂಪನಿಯಲ್ಲಿ ದಾಖಲೆಗಳಿವೆ. ಸದರಿ ಸಾಲ ಮರುಪಾವತಿಯಾಗಿರುತ್ತದೆ. ಸದರಿ ಸಾಲ ಮರುಪಾವತಿಯಾದ ನಂತರ ಪ್ರತಿವಾದಿ ನಿಮ್ಮ ಕಂಪನಿಯಿಂದ 5 ಲಕ್ಷ ರೂಪಾಯಿ ಸಾಲ ಪಡೆದಿದ್ದ ಎಂದರೆ ಸರಿಯಲ್ಲ. ನಿಮ್ಮ ಕಂಪನಿಯಲ್ಲಿ ಸಾಲ ಪಡೆದವರ ದಾಖಲಾತಿಗಳನ್ನು ಇಟ್ಟಿದ್ದೀರಿ ಎಂದರೆ ಸರಿ. ನಾನು ಫೈನಾನ್ಸ್ ಕಂಪನಿಯನ್ನು 2012ರಲ್ಲಿ ಪ್ರಾರಂಭಿಸಿ 2025ರಲ್ಲಿ ಕ್ಲೋಸ್ ಮಾಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ಆಫ್ ಫರ್ಮ್ ಎನ್ನುವ ದಾಖಲೆಯ ದೃಢೀಕೃತ ನಕಲನ್ನು ತೋರಿಸಿ ಸದರಿ ದಾಖಲೆಯು ನಿಮ್ಮ ಫೈನಾನ್ಸ್ ಕಂಪನಿಗೆ ಸೇರಿದ್ದು ಎಂದು ಕೇಳಿದಾಗ ಸಾಕ್ಷಿ ಅದನ್ನು ಒಪ್ಪಿ ದ ಕಾರಣ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಮ್ಮ ಫೈನಾನ್ಸ್ ಕಂಪನಿಯಲ್ಲಿ ಪಿಗ್ಮಿ ಕಲೆಕ್ಷನ್ ಸಹ ಮಾಡುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ರಶೀದಿಯನ್ನು ತೋರಿಸಿ ಇದು ಪ್ರಭಾಕರ್ ರವರ

ಸಹಿ ಇರುವ ರಶೀದಿ ಎಂದು ಕೇಳಿದಾಗ ಸಾಕ್ಷಿ ಅದು ಪ್ರಭಾಕರ್ ರವರ ಸಹಿ ಅಲ್ಲ ಎಂದು ಅಲ್ಲಗಳೆದಿರುತ್ತಾರೆ. ಸಾಕ್ಷಿ ಅಲ್ಲಗಳೆದ ದಾಖಲೆಯನ್ನು ಗುರೂತಿಸುವಿಕೆಗಾಗಿ ನಿಸಿ-1 ಎಂದು ಗುರುತಿಸಲಾಯಿತು. ಪ್ರಭಾಕರ್ ಇವರು ನಿಮ್ಮ ಕಂಪನಿಯ ಪಾಲುದಾರರಾಗಿದ್ದ ಕಾರಣ ಅವರ ಸಹಿಯನ್ನು ಗುರುತಿಸುತ್ತೀರಾ ಎಂದು ಕೇಳಿ ನಿಪಿ-4ಡಿ ಯನ್ನು ತೋರಿಸಿದಾಗ ಸಾಕ್ಷಿ ನಿಪಿ-4ಡಿ ಪ್ರಭಾಕರ್ ರವರ ಸಹಿ ಎಂದು ಒಪ್ಪಿರುತ್ತಾರೆ. ನಿಪಿ-4ಡಿ ಸಹಿ ಮತ್ತು ನಿಸಿ-1ರಲ್ಲಿರುವ ಸಹಿ ಪ್ರಭಾಕರ್ ರವರ ಸಹಿ ಎಂದರೆ ಸರಿಯಲ್ಲ. ವಾದಿ ಈಗ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿ ಅವರಿಗೆ ಪದೇ ಪದೇ ಮಾತು ನಿಲ್ಲುತ್ತದೆ ಎಂದು ನುಡಿಯುತ್ತಾರೆ ಮತ್ತು ವೈದ್ಯಕೀಯವಾಗಿ ಅವರು ಚೆನ್ನಾಗಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ವೈದ್ಯಕೀಯ ಸಮಸ್ಯೆ ಸುಮಾರು 7-8 ವರ್ಷಗಳಿಂದ ಇದೆ. ನೀವು ವಾದಿಗೆ ಚಿಕಿತ್ಸೆ ಕೊಡಿಸಿದ್ದೀರಾ ಎಂದರೆ ಸಾಕ್ಷಿ ಕೊಡಿಸಿದ್ದೇನೆಂದು ನುಡಿಯುತ್ತಾರೆ. ನೀವು ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿರುವ ದಾಖಲೆಗಳನ್ನು ತೋರಿಸಿದಾಗ ಸಾಕ್ಷಿ ದಿಃ 15.07.2024ರ ಮೆಡಿಕೇರ್ ಆಸ್ಪತ್ರೆಯ ಒಂದು ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು ನಿಪಿ- 9 ಎಂದು ಗುರುತಿಸಲಾಯಿತು. ನಿಪಿ-9ರಲ್ಲಿ ರಶೀದಿ ನಂಬರ್ ನಮೂದು ಮಾಡಿಲ್ಲ ಎಂದರೆ ಸರಿ. 2024ರ ಮೊದಲು ವಾದಿಗೆ ಚಿಕಿತ್ಸೆ ನೀಡಿದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ.

ಪ್ರತಿವಾದಿ ನಮ್ಮ ಫೈನಾನ್ಸ್ ಕಂಪನಿಯಲ್ಲಿ 5 ಲಕ್ಷ ರೂಪಾಯಿ ಸಾಲ ಪಡೆದ ಬಗ್ಗೆ ಅದರ ಭದ್ರತೆಗಾಗಿ ನಿಪಿ-4 ದಾಖಲೆಯನ್ನು ನೀವು ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

**ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.**